ಪ್ರಥಮ ದರ್ಜೆ ನ್ಯಾಯಿಕಾಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು

ಸಿ ಸಿ ನಂ. **953/2016**

ದಿಃ **04 - 07-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

| | | | |
|---|---|---|---|
| ಹೆಸರು | ಶೇಷಾದ್ರಿ | ಸಿ.ಡಬ್ಲ್ಯೂ | **23** |
| ವಯಸ್ಸು | 62 ವರ್ಷ | ಪಿ.ಡಬ್ಲ್ಯು: | **06** |
| ತಂದೆಯ ಹೆಸರು | ವೆಂಕಟರಮಣಪ್ಪ | | |
| ವೃತ್ತಿ | ನಿವೃತ್ತ ಪೊಲೀಸ್ ನಿರೀಕ್ಷಕರು | | |
| ವಾಸಸ್ಥಳ | ಶಿರಾ ಗೇಟ್, ತುಮಕೂರು ನಗರ | | |

ಮುಖ್ಯ ವಿಚಾರಣೆಃಃ ಶ್ರೀ ಸರ್ಕಾರಿ ಅಭಿಯೋಜಕರಿಂದಃ

ನಾನು ದಿನಾಂಕ 18-09-2015 ರಿಂದ 27-07-2017 ರವರೆಗೆ ಗೌರಿಬಿದನೂರಿನ ವೃತ್ತ ನಿರೀಕ್ಷಕರಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕ 01-12-2015 ರಂದು ಚಾ.ಸಾ 22 ರವರಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡು ಅದೇ ದಿನ ಮೃತ ಗಂಗಿರೆಡ್ಡಿ ಮತ್ತು ಮದನ್ ಕುಮಾರರವರ ಮೃತ ದೇಹಗಳು ಯಲಹಂಕದ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಇದ್ದು ಈ ಬಗ್ಗೆ ಶವ ತನಿಖೆಗೆ ಚಾ.ಸಾ 21 ಮತ್ತು 22 ರವರನ್ನು ನೇಮಕ ಮಾಡಿ ಕಳುಹಿಸಿರುತ್ತೇನೆ. ಅದೇ ದಿನ ಅಪಘಾತ ನಡೆದ ಸ್ಥಳಕ್ಕೆ ಬೇಟಿ ನೀಡಿ ಫಿರ್ಯಾದುದಾರರು ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆಯನ್ನು ಚಾ.ಸಾ 15 ರವರ ಸಮಕ್ಷಮ ನಡೆಸಿದ್ದು ಈ ಸಮಯದಲ್ಲಿ ಅಪಘಾತಕ್ಕೆ ಕಾರಣವಾದ ಕೆಎ 51 ಎಂ 5724 ನೊಂದಣಿಯ ವಾಹನ ಹಾಗೂ ಅಪಘಾತಕ್ಕೆ ಒಳಗಾದ ಕೆಎ 40 ಕೆ 9074 ನೊಂದಣಿಯ ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿರುತ್ತೇನೆ ಹಾಗೂ ಮಾಲು ಪಟ್ಟಿ ಸಂಖ್ಯೆ 135/2015 ರಲ್ಲಿ ನಮೂದು ಮಾಡಿರುತ್ತೇನೆ. ಸಾಕ್ಷಿಯು ದಿನಾಂಕ 01-12-2015 ರ ಮಾಲುಪಟ್ಟಿಯನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ಮಾಲುಪಟ್ಟಿಯನ್ನು ನಿಪಿ-14 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-14 ಎ ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಕೃತ್ಯ ನಡೆದ ಸ್ಥಳದ ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತೇನೆ. ಸಾಕ್ಷಿಯು ಕಚ್ಚಾ ನಕ್ಷೆಯನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ಕಚ್ಚಾ

ನಕ್ಷೆಯನ್ನು ನಿಪಿ-15 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-15 ಎ ಎಂದು ಗುರುತಿಸಲಾಯಿತು. ನಂತರ ಅಪಘಾತಕ್ಕೆ ಒಳಗಾದ ವಾಹನಗಳ ಭಾವ ಚಿತ್ರಗಳನ್ನು ತೆಗೆದುಕೊಂಡಿರುತ್ತೇನೆ. ಸಾಕ್ಷಿಯು ನಿಪಿ- 2 ರಿಂದ 5 ರ ಭಾವ ಚಿತ್ರಗಳನ್ನು ನೋಡಿ ಅದರಲ್ಲಿ ಕಾಣಿಸುವ ಕಾರ್ ಹಾಗೂ ದ್ವಿಚಕ್ರ ವಾಹನವನ್ನು ಗುರುತಿಸಿರುತ್ತಾರೆ. ನಂತರ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಸ್ಥಳದಲ್ಲಿ ಬೆಳಗ್ಗೆ 10.00 ಗಂಟೆಯಿಂದ 11.00 ಗಂಟೆವರೆಗೆ ನಡೆಸಿರುತ್ತೇನೆ. ಸಾಕ್ಷಿಯು ನಿಪಿ-7 ರ ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-7 ಬಿ ಎಂದು ಗುರುತಿಸಲಾಯಿತು. ದಿನಾಂಕ 22-02-2016 ರಂದು ನಾನು ಐ.ಎಂ.ವಿ ರಿಪೋರ್ಟ ಅನ್ನು ಪಡೆದಿರುತ್ತೇನೆ. ಸಾಕ್ಷಿಯು ನಿಪಿ-12 ರ ಐ.ಎಂ.ವಿ ರಿಪೋರ್ಟ ಅನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-12 ಎ ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಚಾ.ಸಾ 2 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಅದೇ ದಿನ ಅಪಘಾತಕ್ಕೆ ಒಳಗಾದ ವಾಹನಗಳ ತಪಾಸಣೆಗಾಗಿ ಚಿಕ್ಕಬಳ್ಳಾಪುರದ ಆರ್.ಟಿ.ಓ ಕಛೇರಿಗೆ ಮನವಿಯನ್ನು ಸಲ್ಲಿಸಿರುತ್ತೇನೆ. ಅದೇ ದಿನ ಚಾ. ಸಾ 22 ಮತ್ತು 23 ರವರಿಂದ ಶವ ತನಿಖಾ ವರದಿಯನ್ನು ಪಡೆದಿರುತ್ತೇನೆ. ದಿನಾಂಕ 04-12-2015 ರಂದು ಸ್ಕಾರ್ಪಿಯೊ ವಾಹನದ ಮಾಲೀಕರಾದ ಚಾ.ಸಾ 16 ರವರ ವಿಚಾರಣೆ ಮಾಡಿ ಅವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ವಾಹನದ ಚಾಲಕನಾದ ಕಲೀಲ್ ಬಿನ್ ಅಲ್ಲಾಬಕಾಶ್ ರವರನ್ನು ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ನಂತರ ಸ್ಕಾರ್ಪಿಯೊ ವಾಹನವನ್ನು ಅದರ ಮಾಲೀಕರಾದ ಚಾ.ಸಾ 16 ರವರಿಗೆ ಇಂಡೆಮ್ ನಿಟಿ ಬಾಂಡ್ ಮೂಲಕ ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿಯು ನಿಪಿ- 13 ರ ವಾಹನ ಬಿಡುಗಡೆ ಕರಾರು ಪತ್ರದ ಮೇಲೆ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-13 ಸಿ ಎಂದು ಗುರುತಿಸಲಾಯಿತು. ನಂತರ ದಿನಾಂಕ 24-07-2016 ರಂದು ಮೃತಪಟ್ಟವರ ಶವ ಪರೀಕ್ಷಾ ವರದಿಯನ್ನು ಯಲಹಂಕದ ಸರ್ಕಾರಿ ಆಸ್ಪತ್ರೆಯಿಂದ ಪಡೆದಿರುತ್ತೇನೆ. ಸಾಕ್ಷಿಯು ನಿಪಿ-10 ಮತ್ತು 11 ರ ಶವ ಪರೀಕ್ಷಾ ವರದಿಯನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-10 ಎ ಮತ್ತು 11 ಎ ಎಂದು ಗುರುತಿಸಲಾಯಿತು. ದಿನಾಂಕ 27-07-2016 ರಂದು ಚಾ.ಸಾ 7 ರಿಂದ 9 ಹಾಗೂ ಚಾ.ಸಾ 13 ಮತ್ತು 14 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿನಾಂಕ 01-08-2016 ರಂದು ಫಿರ್ಯಾದುದಾರರಾದ

ಚಾ.ಸಾ 1 ಹಾಗೂ ಸಾಕ್ಷಿಯಾದ ಚಾ.ಸಾ 3 ರವರ ಮರು ಹೇಳಿಕೆಯನ್ನು ಪಡೆದಿರುತ್ತೇನೆ. ನಂತರ ಚಾ.ಸಾ 9,13 ಮತ್ತು 14 ರವರ ಮರು ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ತನಿಖೆಯಲ್ಲಿ ಆರೋಪಿಯ ವಿರುದ್ಧ ಆರೋಪವು ಸಾಬೀತಾದ ಕಾರಣ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ಇಂದು ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಈ ಪ್ರಕರಣದಲ್ಲಿ ಅಪಘಾತವನ್ನು ಉಂಟು ಮಾಡಿಡರುವ ವ್ಯಕ್ತಿ ಎಂದು ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲು ಆರೋಪಿ ಪರ ವಕೀಲರಾದ ಶ್ರೀ ಎನ್.ವಿ ರವರಿಂದಃ

ದಿನಾಂಕ 01-12-2015 ರಂದು ಕಡತವನ್ನು ಪಡೆದುಕೊಂಡು ನಾನು ಯಲಹಂಕ ಆಸ್ಪತ್ರೆಗೆ ಹೋಗಿ ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-15 ರ ನಕ್ಷೆಗೆ ಪ್ರತ್ಯೇಕ ಸಾಕ್ಷಿಗಳು ಯಾರೂ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಿಪಿ-15 ರ ನಕ್ಷೆಯನ್ನು ಯಾವ ಸಮಯದಲ್ಲಿ ತಯಾರಿಸಲಾಯಿತು ಎಂದು ನಿಪಿ-15 ರಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪಂಚನಾಮೆಯ ವೇಳೆಯಲ್ಲಿ ಕಚ್ಚಾ ನಕ್ಷೆಯನ್ನು ತಯಾರಿಸಲಾಯಿತು ಎಂದು ನುಡಿಯುತ್ತಾರೆ. ನಿಪಿ-7 ರ ಪಂಚನಾಮೆಯನ್ನು ನಾನು ಠಾಣೆಯಲ್ಲಿಯೇ ಕುಳಿತು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಾಕ್ಷಿಗಳ ಹೇಳಿಕೆಯನ್ನು ಪಡೆಯದೇ ಠಾಣೆಯಲ್ಲಿಯೇ ಕುಳಿತು ಅವರ ಹೇಳಿಕೆಗಳನ್ನು ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಯಾವುದೇ ಆರೋಪ ಸಾಬೀತು ಆಗದೇ ಇದ್ದರೂ ಸಹ ಯಾವುದೇ ಘಟನೆ ನಡೆಯದಿದ್ದರೂ ಸಹ ಅರೋಪಿಯ ವಿರುದ್ಧ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು